ಸಾಕ್ಷಿಯನ್ನು ಕರೆಯಿಸಿ. ಪ್ರಮಾಣ ವಚನ ಬೋಧಿಸಿತು. ದಿನಾಂಕ፥ 18.07.2017

ಮುಂದುವರೆದ ಪಾಟೀಸವಾಲು፥ ಸಿಆರ್‌ಎನ್ ವಕೀಲರಿಂದ

ನನ್ನ ಮನೆ , ರಾಮೇಗೌಡನ ಮನೆ ಮತ್ತು ಸಿದ್ದರಾಮೇಗೌಡನ ಮನೆ ಮೂರೂ ಮನೆಗಳಿಗೂ ಪಶ್ಚಿಮ ದಿಕ್ಕಿನಲ್ಲಿ ಉತ್ತರದ ಕಡೆ ನೇರವಾಗಿ ಒಂದೇ ಗೋಡೆ ಇರುತ್ತದೆ ಎಂದರೆ ಸರಿ. ಸದರಿ ಗೋಡೆಗೆ ಯಾವುದೇ ಕಿಟಕಿ ಇಲ್ಲವೇ ಬೆಳಕಿಂಡಿಗಳು ಇಲ್ಲವೆಂದರೆ ಸರಿ. ನನ್ನ ಮನೆಯ ಉತ್ತರಕ್ಕೆ ಇರುವ ಸಿದ್ದರಾಮೇಗೌಡ ಅಥವಾ ದಕ್ಷಿಣಕ್ಕೆ ಇರುವ ನನ್ನ ಅಣ್ಣ ರಾಮೇಗೌಡ ರವರು ಪ್ರತಿವಾದಿಗಳ ವಿರುದ್ಧ ಯಾವುದೇ ದಾವೆ ಹಾಕಿಲ್ಲ ಎಂದರೆ ಸರಿ. 2ನೇ ಪ್ರತಿವಾದಿಯು ನನ್ನ ಮನೆ , ರಾಮೇಗೌಡನ ಮನೆ ಮತ್ತು ಸಿದ್ದರಾಮೇಗೌಡನ ಮನೆಯ ಪಶ್ಚಿಮಕ್ಕೆ ಎರಡು ಅಡಿ ಅಂತರ ಬಿಟ್ಟು ಮನೆ ಕಟ್ಟಿದ್ದಾರೆ ಎಂದರೆ ಸುಳ್ಳು. ನಿಪಿ፥8 ರಲ್ಲಿ ಕಾಣುತ್ತಿರುವಂತೆ ನನ್ನ ಮನೆಯ ಬಾಗಿಲಿನ ನೇರಕ್ಕೆ ಇರುವ ಸೂರನ್ನು ಗರಗಸದಿಂದ ಯಾರು ಕುಯ್ದಿದ್ದಾರೆ ಎಂದು ಕೇಳಿದರೆ ಸಾಕ್ಷಿಯು ಪ್ರಶ್ನೆಗೆ ನೇರವಾಗಿ ಏನನ್ನೂ ಹೇಳಿಲ್ಲ. ರಾಮೇಗೌಡನ ಮನೆಯ ಸೂರು ಮತ್ತು ನನ್ನ ಮನೆಯ ಸೂರು ಒಂದೇ ನೇರಕ್ಕೆ ಇಲ್ಲವೆಂದರೆ ಸರಿ. ನನ್ನ ಮನೆಯ ಒಳಗಡೆ ಮದ್ಯದಲ್ಲಿ ಅಂಗಳವಿದೆ ಎಂದರೆ ಸರಿ. 2ನೇ ಪ್ರತಿವಾದಿ ತನ್ನ ಮನೆಯನ್ನು ಕೆಡವುದಕ್ಕಿಂತ ಮುಂಚೆ ನನ್ನ ಮನೆ, 2ನೇ ಪ್ರತಿವಾದಿಯ ಮನೆ ಮತ್ತು ರಾಮೇಗೌಡನ ಮನೆ ಒಂದೇ ಮನೆಯಾಗಿತ್ತು ಎಂದರೆ ಸರಿಯಲ್ಲ.

ನಿಪಿ፥ 13 ರಲ್ಲಿ 2ನೇ ಪ್ರತಿವಾದಿ ತನ್ನ ಮನೆಯನ್ನು ಕೆಡವಿದ ನಂತರ ಉಳಿದುಕೊಂಡಿದ್ದ ಮೋಟು ಗೋಡೆ ಕಾಣುತ್ತಿದೆ ಎಂದರೆ ಸರಿಯಲ್ಲ. ನನ್ನ ಮನೆ ಮತ್ತು 2ನೇ ಪ್ರತಿವಾದಿಯ ಮನೆಯ ಗೋಡೆಗಳು ಜಂಟಿಯಾಗಿದ್ದವು 2ನೇ ಪ್ರತಿವಾದಿ ತನ್ನ ಮನೆ ಕೆಡವಿದ ನಂತರ ನಿಪಿ፥ 13 ರಲ್ಲಿ ಕಾಣುವಂತೆ ಮೋಟುಗೋಡೆ ಮಾತ್ರ ಉಳಿದಿದೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯ ತಂದೆ ಹೆಸರು ಮಾದೇಗೌಡ ಎಂದರೆ ಸರಿ. ಮಾದೇಗೌಡನ ತಂದೆ ಹೆಸರು ದಾಸೇಗೌಡ ಎಂದರೆ ಸರಿ. ನಿಪಿ፥ 1 ನ್ನು ನಾನೇ ಹಾಜರುಮಾಡಿದ್ದೇನೆ ಎಂದರೆ ಸರಿ. ನಿಪಿ፥1 ನ್ನು 2ನೇ ಪ್ರತಿವಾದಿಯ ತಂದೆ ಮತ್ತು ತಾತ ರಂಗದಾಸಯ್ಯನಿಗೆ ಬರೆದುಕೊಟ್ಟಿದ್ದಾರೆ ಎಂದರೆ ಸರಿ, ನಿಪಿ፥ 1 ನ್ನು ನಾನು ಓದಿದ್ದೇನೆ. ಅದರಲ್ಲಿ ಚೆಕ್ಕು ಬಂದಿ ಬರೆದಿದೆ ಎಂದರೆ ಸರಿ. ನಿಪಿ፥ 1 ರಲ್ಲಿ ಪೂರ್ವಕ್ಕೆ ಬೀರೇದೇವರ ದೇವಸ್ಥಾನ ಪಶ್ಚಿಮಕ್ಕೆ 2ನೇ ಪ್ರತಿವಾದಿಯ ತಂದೆ ಮತ್ತು ತಾತನ ಬಾಬ್ತು ಆಸ್ತಿ ಎಂದು ನಮೂದಾಗಿದೆ ಎಂದರೆ ಸರಿ.

ನಿಪಿ፥ 2 ನ್ನು ನನ್ನ ತಂದೆ ಆಸ್ತಿ ಖರೀದಿ ಮಾಡಿದ ಬಗ್ಗೆ ಹಾಜರುಮಾಡಿದ್ದೇನೆ. ನಿಪಿ፥ 2 ರಲ್ಲೂ ಪಶ್ಚಿಮಕ್ಕೆ 2ನೇ ಪ್ರತಿವಾದಿಯ ತಾತನ ಆಸ್ತಿ ಇದೆ ಎಂದು ನಮೂದಾಗಿದೆ ಎಂದರೆ ಸರಿ. ನನ್ನ ಮನೆಯ ಪಶ್ಚಿಮಕ್ಕೆ ನನಗೆ ಖಾಲಿ ಜಾಗ ಇದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮನೆಯ ನೇರಕ್ಕೆ ಪಶ್ಚಿಮ ದಿಕ್ಕಿನಲ್ಲಿ ಸೂರನ್ನು ನಾನೇ ಗರಗಸದಿಂದ ಕುಯ್ದಿದ್ದೇನೆ ಎಂದರೆ ಸರಿಯಲ್ಲ. ದಾವಾ ಎ ಆಸ್ತಿ ನನ್ನದು ಎಂದು ತೋರಿಸುವ ಯಾವುದೇ ದಾಖಲೆ ಹಾಜರುಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹಿಂದೆ ಹಾಕಿದ್ದ ದಾವೆ ಮತ್ತು ಅಪೀಲು ವಜಾ ಆದ ನಂತರ ಮತ್ತೆ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ನನ್ನ ಮನೆ ಮತ್ತು 2ನೇ ಪ್ರತಿವಾದಿಯ ಮನೆ ಜಂಟಿ ಗೋಡೆ ಹೊಂದಿದ್ದವು ಎಂಬ ಬಗ್ಗೆ ನಿಪಿ፥ 9 ಮತ್ತು ನಿಪಿ፥ 10 ಪೋಟೋಗಳೇ ಸಾಕ್ಷಿ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ತನ್ನ ಹಳೇ ಮನೆಯನ್ನು ಕೆಡವಿ ಪೂರ್ವ ಮತ್ತು

ಪಶ್ಚಿಮ ದಿಕ್ಕುಗಳಲ್ಲಿ ತಲಾ ಒಂದೂಮುಕ್ಕಾಲು ಅಡಿ ಖಾಲಿ ಬಿಟ್ಟು ತನ್ನ ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಖಾಲಿ ಜಾಗದ ಬಗ್ಗೆ 2ನೇ ಪ್ರತಿವಾದಿಗೆ ಬಿಟ್ಟರೆ ನನಗಾಗಲೀ 1ನೇ ಪ್ರತಿವಾದಿಗಾಗಲೀ ಯಾವುದೇ ಹಕ್ಕು ಇಲ್ಲವೆಂದರೆ ಸರಿಯಲ್ಲ. ಪಶ್ಚಿಮ ಭಾಗದ ಗೋಡೆಗೆ 2ನೇ ಪ್ರತಿವಾದಿ ಪೂರ್ವ ಭಾಗದ ಗೋಡೆಗೆ ನಾನು ಸುಣ್ಣಬಣ್ಣ ಮಾಡಿಸುತ್ತಿದ್ದೆವು ಎಂದರೆ ಸರಿಯಲ್ಲ.

ನಾನು ಇತ್ತೀಚೆಗೆ ನನ್ನ ಅಣ್ಣನ ಹತ್ತಿರ ಹಕ್ಕುಕುಲಾಸೆ ಪತ್ರ ಬರೆಯಿಸಿಕೊಂಡು ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸುಳ್ಳು. ನನ್ನ ಅಣ್ಣ ಖಾತೆ ಮಾಡಿಸಿಕೊಳ್ಳಲು ಹಕ್ಕು ಕುಲಾಸೆ ಪತ್ರ ಬರೆದುಕೊಟ್ಟಿಲ್ಲವೇ ಎಂದರೆ ಬರೆದುಕೊಟ್ಟಿದ್ದಾನೆ. ಹಕ್ಕುಕುಲಾಸೆ ಪತ್ರವನ್ನು ಹಾಜರುಮಾಡಿಲ್ಲ ಎಂದರೆ ನನ್ನ ವಕೀಲರಿಗೆ ಕೊಟ್ಟಿದ್ದೇನೆ. ಹಕ್ಕು ಕುಲಾಸೆ ಪತ್ರದಲ್ಲೂ ಕೂಡ ಪಶ್ಚಿಮಕ್ಕೆ 2ನೇ ಪ್ರತಿವಾದಿಯ ತಾತನ ಆಸ್ತಿ ಎಂದು ಬರೆದಿದ್ದೇವೆ ಎಂದರೆ ಸರಿಯಲ್ಲ. ಆ ದಾಖಲೆಯನ್ನು ಹಾಜರುಮಾಡಿದರೆ ಸತ್ಯ ಸಂಗತಿ ಗೊತ್ತಾಗುತ್ತದೆ ಎಂದು ಹಾಜರುಮಾಡುತ್ತಿಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ತನ್ನ ಮನೆಯ ಪೂರ್ವ ಮತ್ತು ಪಶ್ಚಿಮ ದಿಕ್ಕಿನಲ್ಲಿ ಖಾಲಿ ಬಿಟ್ಟುಕೊಂಡಿರುವ ಜಾಗದಲ್ಲಿ ಗಾಳಿ ಮತ್ತು ಬೆಳಕು ಪಡೆಯುವ ಹಕ್ಕು 2ನೇ ಪ್ರತಿವಾದಿಗೆ ಮಾತ್ರ ಇದೆ ಎಂದರೆ ಸರಿಯಲ್ಲ. ವಾದಪತ್ರ ಮತ್ತು ಪ್ರಮಾಣ ಪತ್ರದಲ್ಲಿ ನನ್ನ ಮನೆಯ ಪಶ್ಚಿಮ ದಿಕ್ಕಿನಲ್ಲಿ ನನಗೆ ಗಾಳಿ ಮತ್ತು ಬೆಳಕಿನ ಹಕ್ಕು ಇದೆ ಎಂದು ಸುಳ್ಳು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯ ಮನೆಯಿಂದಾಗಿ ನನಗಾಗಲೀ ನನ್ನ ಅಣ್ಣನಿಗಾಗಲೀ ಯಾವುದೇ ರೀತಿಯಲ್ಲಿ ತೊಂದರೆಯಾಗಿಲ್ಲ ಎಂದರೆ ಸರಿಯಲ್ಲ. ಏನು ತೊಂದರೆಯಾಗಿದೆ ಹೇಳಿ ಎಂದರೆ ಸಾಕ್ಷಿಗೆ ತೊಂದರೆ ಏನೆಂದು ಹೇಳಲು ಸಾಧ್ಯವಾಗಿಲ್ಲ.

ನನ್ನ ಮನೆಗೆ ಇದ್ದಂತೆ ನನ್ನ ಅಣ್ಣನ ಮನೆಗೆ ಮತ್ತು ರಾಮೇಗೌಡನ ಮನೆಗೆ ಅಂಗಳಗಳು ಇವೆಯೇ ಎಂದರೆ ಸಾಕ್ಷಿಯು ನಾನು ನೋಡಲು ಹೋಗಿಲ್ಲ ಎಂದು ನಿರ್ಲಕ್ಷದ ಉತ್ತರ ನೀಡಿದ್ದಾರೆ. ನನ್ನ ಅಂಗಳದಲ್ಲೇ ನನಗೆ ಸಾಕಷ್ಟು ಗಾಳಿ ಬೆಳಕು ಸಿಗುತ್ತದೆ ಎಂದರೆ ಸುಳ್ಳು. ಹಾಗಿದ್ದರೂ ಸುಳ್ಳು ಸಂಗತಿಗಳಿಂದ ದಾವೆ ತಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ

ಓ ಹೇ ಕೇ ಸಾ ಸ ಇ ಎ ಒ

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಯಳಂದೂರು.